

# 'ಸೂತ್ರಧಾರಿ' ಚಂದನ್ ಶೆಟ್ಟಿ

ಕ್ರೈಂ ಥ್ರಿಲ್ಲರ್ ಕಥಾಹಂದರದ 'ಸೂತ್ರಧಾರಿ' ಸಿನಿಮಾದಲ್ಲಿ ನಾಯಕ ನಟನಾಗಿ ಗಾಯಕ, ಸಂಗೀತ ನಿರ್ದೇಶಕ ಚಂದನ್ ಶೆಟ್ಟಿ ನಟಿಸುತ್ತಿದ್ದು, ಚಿತ್ರದ ಚಿತ್ರೀಕರಣ ಬಹುತೇಕ ಮುಕ್ತಾಯವಾಗಿದೆ. ಈಗಾಗಲೇ ಬಿಡುಗಡೆಯಾಗಿರುವ ಚಿತ್ರದ 'ಡ್ಯಾಶ್ ಸಾಂಗ್' ಅಧಿಕ ಸಂಖ್ಯೆಯಲ್ಲಿ ವೀಕ್ಷಣೆಯಾಗಿ, ಶಹಬ್ಬಾಸ್‌ಗಿರಿಯನ್ನೂ ಗಿಟ್ಟಿಸಿಕೊಂಡಿದೆ.

ಸಿನಿಮಾದ ಎರಡು ಹಾಡುಗಳ ಚಿತ್ರೀಕರಣ ಮಾತ್ರ ಬಾಕಿಯಿದ್ದು, ಸದ್ಯ ಲೂಪ್ ಸ್ಟುಡಿಯೊದಲ್ಲಿ ಡಬ್ಬಿಂಗ್ ನಡೆಯುತ್ತಿದೆ. ಚಂದನ್ ಶೆಟ್ಟಿ ಈ ಸಿನಿಮಾದಲ್ಲಿ ನಾಯಕನಷ್ಟೇ ಅಲ್ಲ, ಚಿತ್ರದ ಸಂಗೀತ ನಿರ್ದೇಶಕ ಕೂಡ ಹೌದು. ಈ ಚಿತ್ರವನ್ನು ಕಿರಣ್ ಕುಮಾರ್ ನಿರ್ದೇಶಿಸುತ್ತಿದ್ದಾರೆ.

ದಕ್ಷಿಣ ಭಾರತದಲ್ಲಿ 'ಮೈ ಮೂವೀ ಬಜಾರ್' ಮೂಲಕ ಸಾಕಷ್ಟು ಇವೆಂಟ್‌ಗಳನ್ನು ನಡೆಸುತ್ತಿರುವ ನವರಸನ್, ಈಗಲ್ ಮೀಡಿಯಾ ಕ್ರಿಯೇಷನ್ಸ್ ಮೂಲಕ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. 'ಸೂತ್ರಧಾರಿ' ಇವರ ನಿರ್ಮಾಣದ ಐದನೇ ಚಿತ್ರ.

ಪಿ.ಕೆ.ಎಚ್. ದಾಸ್ ಛಾಯಾಗ್ರಹಣ, ಸತೀಶ್ ಚಂದ್ರಯ್ಯ ಸಂಕಲನ ಹಾಗೂ ಮೋಹನ್ ಅವರ ನೃತ್ಯ ನಿರ್ದೇಶನ ಈ ಚಿತ್ರಕ್ಕಿದೆ. ಚಂದನ್ ಶೆಟ್ಟಿ ಅವರಿಗೆ ನಾಯಕಿಯಾಗಿ ಅಪೂರ್ವ ನಟಿಸಿದ್ದಾರೆ. ಸಂಜನಾ ಆನಂದ್ ಹಾಡೊಂದಕ್ಕೆ ಹೆಜ್ಜೆ ಹಾಕಿದ್ದಾರೆ.



# ಇದಕ್ಕಿಂತ ಖುಷಿ ಬೇರೇನಿದೆ; ಮೇಘನಾ

'ರವಿಚಂದ್ರನ್ ಅವರ ಸಿನಿಮಾಗಳನ್ನು ನೋಡುತ್ತಾ ಬೆಳೆದವಳು ನಾನು. ಈಗ ಅವರಿಗೇ ನಾಯಕಿಯಾಗಿ ನಟಿಸುವ ಅವಕಾಶ ಸಿಕ್ಕಿದೆ. ಇದಕ್ಕಿಂತ ಬೇರೆ ಸಂತೋಷ ಇನ್ನೇನಿದೆ' ಎಂದು ಖುಷಿಯಿಂದ ಹೇಳಿಕೊಂಡಿದ್ದಾರೆ ನಟಿ ಮೇಘನಾ ಗಾಂವ್ಕರ್.

'ಶಿವಾಜಿ ಸುರತ್ಕಲ್ 2' ಸಿನಿಮಾದಲ್ಲಿ ಡಿಸಿಪಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದ ಬೆನ್ನಲ್ಲೇ ಮೇಘನಾಗೆ ಮತ್ತೊಂದು ಸಿನಿಮಾ ಆಫರ್ ಬಂದಿದೆ. ರವಿಚಂದ್ರನ್ ಅವರಿಗೆ ನಾಯಕಿಯಾಗಿ 'ಜಡ್ಜ್‌ಮೆಂಟ್' ಸಿನಿಮಾದಲ್ಲಿ ಕಾಣಿಸಿಕೊಳ್ಳುತ್ತಿರುವುದು ಅವರಲ್ಲಿ ಉತ್ಸಾಹ ತುಂಬಿದೆ.

'ಜಡ್ಜ್‌ಮೆಂಟ್' ಕಾನೂನು ವ್ಯವಸ್ಥೆ ಕುರಿತ ಸಿನಿಮಾ ಆಗಿದ್ದು, 'ಲೀಗಲ್ ಥ್ರಿಲ್ಲರ್' ಜಾನರ್‌ನಲ್ಲಿರಲಿದೆ ಎಂದು ಚಿತ್ರತಂಡ ಹೇಳಿದೆ. ಮೇಘನಾ ಅವರದ್ದು ಈ ಚಿತ್ರದಲ್ಲಿ ಲೆಕ್ಚರರ್ ಪಾತ್ರ. ರೋಹಿಣಿ ಎಂಬ ಪಾತ್ರಕ್ಕೆ ಬಣ್ಣ ಹಚ್ಚಲು ಅಣಿಯಾಗುತ್ತಿದ್ದಾರೆ. ರವಿಚಂದ್ರನ್, ರಾಜ್‌ಕುಮಾರ್ ಮೊಮ್ಮಗಳು ಧನ್ಯಾ ರಾಮ್‌ಕುಮಾರ್, ನಟ ದಿಗಂತ್ ಪ್ರಮುಖ ಪಾತ್ರದಲ್ಲಿದ್ದಾರೆ. ಲಕ್ಷ್ಮಿ ಗೋಪಾಲಸ್ವಾಮಿ, ಟಿ.ಎಸ್. ನಾಗಾಭರಣ, ಪ್ರಕಾಶ್ ಬೆಳವಾಡಿ, ರಂಗಾಯಣ ರಘು, ರೂಪಾ ರಾಯಪ್ಪ, ರಾಜೇಂದ್ರ ಕಾರಂತ್ ತಾರಾಗಣವಿದೆ. ಗುರುರಾಜ್ ಬಿ. ಕುಲಕರ್ಣಿ ಈ ಸಿನಿಮಾ ನಿರ್ದೇಶನದ ಹೊಣೆ ಹೊತ್ತಿದ್ದಾರೆ.

ಈ ಹೊಸ ಸಿನಿಮಾ ಬಗ್ಗೆ ಮೇಘನಾ ಅವರಿಗೂ ಹಲವು ನಿರೀಕ್ಷೆಗಳಿವೆ. 'ಇದುವರೆಗೂ, ನಾನು ಇಂಥ ಪಾತ್ರಗಳೇ ಬೇಕು ಎಂದವಳಲ್ಲ. ಆದರೆ ಒಂದೊಳ್ಳೆ ಪಾತ್ರದ ನಿರೀಕ್ಷೆಯಂತೂ ಇದ್ದೇ ಇದೆ' ಎನ್ನುವ ಅವರು, ತಮ್ಮ ಪಾತ್ರಗಳಿಗೆ ಸಂಪೂರ್ಣ ನ್ಯಾಯ ಒದಗಿಸುವುದಾಗಿ ಹೇಳುತ್ತಾರೆ. 'ನಮ್ ಏರಿಯಾಲ್ ಒಂದ್ ದಿನ' ಸಿನಿಮಾ ಮೂಲಕ ಚಂದನವನ ಪ್ರವೇಶಿಸಿದ ಮೇಘನಾ, ಚಾರ್‌ಮಿನಾರ್, ಸಿಂಪಲ್ಲಾಗ್ ಇನ್ನೊಂದು ಲವ್‌ಸ್ಟೋರಿ ಮುಂತಾದ ಸಿನಿಮಾಗಳಲ್ಲಿ ಉತ್ತಮ ಅಭಿನಯ ನೀಡಿದವರು. ವಿನಾಯಕ ಗೆಳೆಯರ ಬಳಗ, ಕಾಳಿದಾಸ ಕನ್ನಡ ಮೇಷ್ಟ್ರು... ಹೀಗೆ ಹಲವು ಸಿನಿಮಾಗಳಲ್ಲಿ ನಟಿಸಿದ್ದಾರೆ.